ಮೂಲ ದಾವೆ ನಂ.93/2019
ಡಿ .ಡಬ್ಲ್ಯೂ.1

<u>ದಿನಾಂಕ:19.02.2021</u>
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು ವಾದಿಯ ಪರವಾಗಿ ಶ್ರೀ ಎಮ್.ಆರ್.ಬಿ. ವಕೀಲರಿಂದ</u>

3. ಈ ದಾವೆ 3 ಸರ್ವೆ ನಂಬರಗಳ ಬಗ್ಗೆ ನಡೆದಿದ್ದು, ದಾವಾ ಆಸ್ತಿಗಳ ಸರ್ವೆ ನಂ. 161, 177 ಮತ್ತು 178 ಆಗಿರುತ್ತದೆ. ಸರ್ವೆ ನಂ. 161 ರಲ್ಲಿ 3 ಎಕರೆ, ಸರ್ವೆ ನಂ. 178 ರಲ್ಲಿ 4 ಎಕರೆ 18 ಗುಂಟೆ, ಹಾಗು ಸರ್ವೆ ನಂ.177 ರಲ್ಲಿ 2 ವರೆ ಎಕರೆ ಜಮೀನು ಇದೆ. ಸರ್ವೆ ನಂ.177 ರ ಚೆಕ್ಕುಬಂದಿ ಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ಮಾನಪ್ಪ ರವರ ಜಮೀನು, ಉತ್ತರಕ್ಕೆ ಮುಕ್ತರ ರವರ ಜಮೀನು, ದಕ್ಷಿಣಕ್ಕೆ ಮುನೆಪ್ಪ ಮುಸಲಾಯಿ ರವರ ಜಮೀನು ಇದೆ. ಸರ್ವೆ ನಂ.178 ರ ಚೆಕ್ಕುಬಂದಿ ಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ಮಾನಪ್ಪ ರವರ ಜಮೀನು, ಉತ್ತರಕ್ಕೆ ಮುಕ್ತರ ರವರ ಜಮೀನು, ದಕ್ಷಿಣಕ್ಕೆ ಮುನೆಪ್ಪ ಮುಸಲಾಯಿ ರವರ ಜಮೀನು ಇದೆ. ಸರ್ವೆ ನಂ.161 ರ ಚೆಕ್ಕುಬಂದಿ ಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ಮಾನಪ್ಪ ರವರ ಜಮೀನು, ಉತ್ತರಕ್ಕೆ ಮುಕ್ತರ ರವರ ಜಮೀನು, ದಕ್ಷಿಣಕ್ಕೆ ಮುನೆಪ್ಪ ಮುಸಲಾಯಿ ರವರ ಜಮೀನು ಇದೆ.

4. 2 ನೇ ಪ್ರತಿವಾದಿಯ ತಂದೆಗೆ ಒಬ್ಬನೆ ಸಹೋದರ ಇದ್ದು ಅವರ ಹೆಸರು ಭೀಮರಾಯ ಆಗಿರುತ್ತದೆ. 2 ನೇ ಪ್ರತಿವಾದಿಯ ತಂದೆಯ ತಂದೆಯ ಹೆಸರು ಲಚಮಣ್ಣ. 2 ನೇ ಪ್ರತಿವಾದಿಯ ತಂದೆ ಹಾಗೂ ಮೇಲೆ ಹೇಳಿದ ಭೀಮರಾಯ ರವರ ಮಕ್ಕಳು ಕೂಡಿಯೇ ಇದ್ದಾರೆ ಎಂದರೆ ಸರಿಯಲ್ಲ. ವಾದಿಯು ಚಿಕ್ಕವನಾಗಿದ್ದಾಗ ಅವರ ತಾಯಿ ಬೇರೆ ಮದುವೆ ಮಾಡಿಕೊಂಡು ಹೋಗಿರುತ್ತಾರೆ. 1 ನೇ ಪ್ರತಿವಾದಿಯೇ ವಾದಿಯನ್ನು ಸಾಕ್ಷಿರುತ್ತಾರೆ ಎಂದರೆ ಸರಿ. ವಾದಿ ಹಾಗೂ ಪ್ರತಿವಾದಿ ನಂ.2 ರಿಂದ 4 ರವರು ಕೂಡಿಯೇ ಬೆಳೆದಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗಳು ವಿಭಾಗವಾಗಿತ್ತು ಎಂದು ನಾನು ಹೇಳಿದ್ದು ಸದರಿ ವಿಭಾಗದಲ್ಲಿ ಯಾರು ಯಾರಿಗೆ ಎಷ್ಟು ಎಷ್ಟು ಹೊಲ ಬಂದಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಸುಮಾರು 20 ರಿಂದ 24 ವರ್ಷಗಳ ಹಿಂದೆ ದಾವಾ ಆಸ್ತಿಗಳು ವಿಭಾಗವಾಗಿರುತ್ತವೆ. ಸದರಿ ವಿಭಾಗ ವಾದಿ, 2 ಮತ್ತು 3 ನೇ

ಪ್ರತಿವಾದಿಯರ ನಡುವೆ ಆಗಿರುತ್ತದೆ. ಸದರಿ ವಿಭಾಗದ ಸಂದರ್ಭದಲ್ಲಿ ನಾನು ಹಾಜರ ಇರಲಿಲ್ಲ. ಸದರಿ ವಿಭಾಗದ ಬಗ್ಗೆ ಕಾಗದ ಪತ್ರ ತಯಾರಿಸಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಸದರಿ ವಿಭಾಗದ ಬಗ್ಗೆ ಎಲ್ಲಿ ಮಾತುಕತೆ ಆಯಿತು ಎಂದು ನನಗೆ ಗೊತ್ತಿಲ್ಲ. ಸದರಿ ವಿಭಾಗದಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಹೊಲ ಹಾಗೂ ಎಷ್ಟಷ್ಟು ಮನೆ ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ. ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರು ಇವತ್ತಿನ ವರೆಗೂ ಕೂಡಿಯೇ ಇದ್ದಾರೆ ಎಂದರೆ ಸರಿಯಲ್ಲ. ಅವರ ನಡುವೆ ದಾವಾ ಆಸ್ತಿಗಳು ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಬಗ್ಗೆ ನನಗೆ ಏನೂ ಗೊತ್ತಿಲ್ಲ ಎಂದರೆ ಸರಿಯಲ್ಲ.

5. 2 ನೇ ಪ್ರತಿವಾದಿಯು ಸರ್ವೆ ನಂ. 178/1 ರಲ್ಲಿ 3 ಎಕರೆ ಜಮೀನನ್ನು ಪೀರಸಾಬ ತಂದೆ ನಬಿಸಾಬ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾ 3 ನೇ ಐಟಂ ಆಸ್ತಿಯನ್ನು 2 ನೇ ಪ್ರತಿವಾದಿಯು ಶಂಕ್ರಣ್ಣ ತಂದೆ ಅಂಬರಣ್ಣ ದೇಸಾಯಿ ರವರಿಗೆ 12 ಲಕ್ಷ ರೂಪಾಯಿಗೆ ಅಡಮಾನ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ 3 ನೇ ಐಟಂ ಆಸ್ತಿಯಲ್ಲಿ 31 ಗುಂಟೆ ಜಮೀನು ರೈಲ್ವೆಗೆ ಭೂ-ಸ್ವಾಧೀನ ಗೊಂಡಿದೆ ಎಂದರೆ ಸಾಕ್ಷಿಯು ಭೂ-ಸ್ವಾಧೀನಗೊಂಡಿರುತ್ತದೆ ಆದರೆ ಎಷ್ಟು ಗುಂಟೆ ಜಮೀನು ಭೂ-ಸ್ವಾಧೀನಗೊಂಡಿರುತ್ತದೆ ಎಂದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಭೂ-ಸ್ವಾಧೀನಗೊಂಡ ಜಮೀನಿನ ಪರಿಹಾರದ ಹಣವಾದ 13,56,250/- ರೂಪಾಯಿಯನ್ನು 2 ನೇ ಪ್ರತಿವಾದಿಯೇ ತೆಗೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಬರೆದುಕೊಟ್ಟಿರುವ ಕ್ರಯ ಪತ್ರದಲ್ಲಿ ವಾದಿ ಮತ್ತು 4 ನೇ ಪ್ರತಿವಾದಿಯ ಸಹಿಗಳು ಇಲ್ಲ ಎಂದರೆ ಸರಿ. ಸದರಿ ಕ್ರಯ ಪತ್ರಕ್ಕೆ 2 ಮತ್ತು 3 ನೇ ಪ್ರತಿವಾದಿಗಳು ಮಾತ್ರ ಸಹಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ 1 ನೇ ಪ್ರತಿವಾದಿಯ ಸಹಿಯೂ ಸಹ ಇಲ್ಲ ಎಂದರೆ ಸರಿ. ನಾನು ಮತ್ತು 2 ಮತ್ತು3 ನೇ ಪ್ರತಿವಾದಿಯರು, ವಾದಿ, 1 ಮತ್ತು 4 ನೇ ಪ್ರತಿವಾದಿಯರಿಗೆ ಗೊತ್ತಿಲ್ಲದೆ ಅವರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಕ್ರಯ ಪತ್ರ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ.

6. 2 ನೇ ಪ್ರತಿವಾದಿಗೆ ಮದ್ಯಪಾನ ಮಾಡುವ ಹಾಗೂ ಇಸಪೇಟ ಜೂಜಾಟ ಆಡುವ ಕೆಟ್ಟ ಚಟಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.